# ಆಂಡ್ರಾಯ್ಡ್



■ ಶಶಿಕುಮಾರ್ ಸಿ.

ಬಹುತೇಕ ಸ್ಮಾರ್ಟ್‌ಫೋನ್‌ಗಳ ಆಪರೇಟಿಂಗ್ ಸಿಸ್ಟಂ ಗೂಗಲ್‌ನ ಆಂಡ್ರಾಯ್ಡ್‌ನದ್ದೇ ಆಗಿರುತ್ತದೆ. ಕಾರಣ ಅದು ಒದಗಿಸುವ ಸರಳವಾದ ಜನಸ್ನೇಹಿ ಸೇವೆ. ಬಳಕೆಗೆ ಹೆಚ್ಚು ಕಿರಿಕಿರಿಯುಂಟಾಗದಂತೆ ಆಂಡ್ರಾಯ್ಡ್ ಆಪರೇಟಿಂಗ್ ಸಿಸ್ಟಂ ಅನ್ನು ಇದುವರೆಗೂ ಒದಗಿಸಿಕೊಂಡು ಬಂದಿರುವ ಗೂಗಲ್, ಈಗ ತನ್ನ ಬಳಕೆದಾರರ ಮುಂದೆ ಇನ್ನಷ್ಟು ಹಲವು ಫೀಚರ್‌ಗಳನ್ನು ಹೊತ್ತುಕೊಂಡು ಬರಲು 'ಆಂಡ್ರಾಯ್ಡ್ 13' ಸಜ್ಜಾಗಿದೆ.

2020ರ ಸೆಪ್ಟೆಂಬರ್ 8ರಂದು ತನ್ನ ಆಂಡ್ರಾಯ್ಡ್ 11 ಆಪರೇಟಿಂಗ್ ಸಿಸ್ಟಂ (ಓಎಸ್) ಅನ್ನು ಬಿಡುಗಡೆ ಮಾಡಿದ್ದ ಗೂಗಲ್, ಆನಂತರ ಸುಮಾರು ಒಂದೂವರೆ ವರ್ಷ ಹೊಸದಾಗಿ ಯಾವುದೇ ಅಪ್‌ಡೇಟೆಡ್ ಓಎಸ್ ವರ್ಶನ್ ಅನ್ನು ಬಿಡುಗಡೆ ಮಾಡಿರಲಿಲ್ಲ. ಆಂಡ್ರಾಯ್ಡ್ 13 ಅಪ್‌ಡೇಟೆಟ್ ವರ್ಶನ್‌ನ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದ ಗೂಗಲ್ ಈಗ ಆ ವರ್ಶನ್ ಅನ್ನು ಬಳಕೆಗೆ ನೀಡಲು ಸಜ್ಜಾಗಿದ್ದು, ಅದರ ಪ್ರಿವ್ಯೂ ವರ್ಶನ್ ಅನ್ನು ಈಗಾಗಲೇ ಬಿಡುಗಡೆ ಮಾಡಿದೆ.

ಬಳಕೆದಾರರ ಖಾಸಗಿತನ ಮತ್ತು ಭದ್ರತೆಗೆ ಹೆಚ್ಚಿನ ಆದ್ಯತೆ ನೀಡುವುದು ಆಂಡ್ರಾಯ್ಡ್ 13 ಮೂಲ ಉದ್ದೇಶ ಎಂದು ಗೂಗಲ್ ಹೇಳಿದೆ. ಪ್ರಿವ್ಯೂ ಆವೃತ್ತಿ ಬಿಡುಗಡೆಯಾದ ಬಳಿಕ, ಬೀಟಾ ಆವೃತ್ತಿ ಲಭ್ಯವಾಗಲಿದೆ. ಅದರ ಪರಿಶೀಲನೆಯ ನಂತರ ಬಳಕೆದಾರರಿಗೆ ಹೊಸ ಓಎಸ್ ಅಪ್‌ಡೇಟ್ ದೊರೆಯಲಿದೆ.

ಆಂಡ್ರಾಯ್ಡ್ 13 ಪ್ರಿವ್ಯೂ ವರ್ಶನ್ ಗೂಗಲ್ ಕಂಪನಿಯದ್ದೇ ಆದ ಪಿಕ್ಸೆಲ್ ಸರಣಿಯ ಸ್ಮಾರ್ಟ್‌ಫೋನ್‌ಗಳಲ್ಲಿ ಮಾತ್ರ ಈಗ ಲಭ್ಯವಿದ್ದು, ಅವು ಪಿಕ್ಸೆಲ್ 6, 6 ಪ್ರೊ, 5ಎ 5ಜಿ, 5, 4ಎ 5ಜಿ, 4ಎ, 4 ಎಕ್ಸ್‌ಎಲ್ ಮತ್ತು 4 ಸ್ಮಾರ್ಟ್‌ಫೋನ್‌ಗಳು. ವರ್ಷಾಂತ್ಯದ ವೇಳೆಗೆ ಎಲ್ಲರ ಬಳಕೆಗೆ ಲಭ್ಯವಿರಲಿದೆ. ಗೂಗಲ್‌ನ ಆಂಡ್ರಾಯ್ಡ್ ಎಂಜಿನಿಯರಿಂಗ್ ವಿಭಾಗದ ಉಪಾಧ್ಯಕ್ಷ ಡೇವ್ ಬುರ್ಕೆ, 'ಥೀಮಿಂಗ್ ಆಪ್ಶನ್, ಖಾಸಗೀತನದ (ಪ್ರೈವೆಸಿ) ಫೀಚರ್ಸ್, ಹೊಸದಾಗಿ ಭಾಷೆಗಳ ಸೇರ್ಪಡೆಗೆ ಆದ್ಯತೆ ಹಾಗೂ ಹಲವು ಇನ್ನಿತರ ಅಪ್‌ಡೇಟ್‌ಗಳು ಲಭ್ಯ' ಎಂದಿದ್ದಾರೆ.

## ಥೀಮಿಂಗ್ ಆಪ್ಶನ್

ಹೊಸದಾಗಿ ಡೈನಾಮಿಕ್ ಆ್ಯಪ್ ಐಕಾನ್‌ಗಳನ್ನು ರಚಿಸಲಾಗಿದ್ದು, ಅದನ್ನು ಎಲ್ಲ ಆ್ಯಪ್‌ಗಳಿಗೂ ಹೊಂದಿಕೆಯಾಗುವಂತೆ ರೂಪಿಸಲಾಗಿದೆ. ಈ ತರಹೇವಾರಿ ಐಕಾನ್‌ಗಳು ನೋಡುಗರಿಗೆ ವಿನೂತನವಾಗಿ ಕಾಣುತ್ತವೆ. ಪ್ರತಿ ಥೀಮ್‌ಗಳು ಹಲವು ಬಗೆಯ ಬಣ್ಣಗಳಿಂದ ರಚಿತವಾಗಿದ್ದು, ಅದು ಮೊಬೈಲ್ ವಾಲ್‌ಪೇರ್ ಅನ್ನು ಅದೇ ಬಣ್ಣದಲ್ಲಿ ಟಿಂಟ್ ರೂಪದಲ್ಲಿ ಕಾಣುವಂತೆ ಮಾಡುತ್ತದೆ. ಹಲವು ಬಗೆಯ ವರ್ಣರಂಜಿತ ಅನುಭವವನ್ನು ಥೀಮಿಂಗ್ ಆಪ್ಶನ್ ಒದಗಿಸಲಿದೆ.

## ಪ್ರೈವೆಸಿ ಫೀಚರ್ಸ್

ಅನುಮತಿ ಮತ್ತು ಸೆಕ್ಯುರಿಟಿ ನಿರ್ವಹಣೆಯ ದೃಷ್ಟಿಯಲ್ಲಿ ನೋಡುವುದಾದರೆ ಗೂಗಲ್, ಆಂಡ್ರಾಯ್ಡ್ 13 ವರ್ಶನ್ ಮೂಲಕ ಹೊಸ ಹಾದಿಯನ್ನು ತುಳಿದಿದೆ. ಸಾಮಾನ್ಯವಾಗಿ ಕೆಲವೊಂದು ಫೋಟೊಗಳನ್ನು ಮತ್ತು ವಿಡಿಯೊಗಳನ್ನು ಹಂಚಿಕೊಳ್ಳುವಾಗ ಮೊಬೈಲ್‌ನ ಎಲ್ಲ ಫೋಟೊಗಳನ್ನು ಮತ್ತು ವಿಡಿಯೊಗಳ ವೀಕ್ಷಣೆಗೆ ಅನುಮತಿ ಕೋರಲಾಗುತ್ತದೆ. ಅನುಮತಿ ನೀಡಿದರೆ ಮಾತ್ರ ಅವುಗಳನ್ನು ಹಂಚಿಕೊಳ್ಳಬಹುದು. ಹೀಗೆ ಅನುಮತಿ ನೀಡುವುದರಿಂದ ಮೊಬೈಲ್‌ನಲ್ಲಿ ಇರುವ ತೀರಾ ವೈಯಕ್ತಿಕ ಫೋಟೊಗಳು ಮತ್ತು ವಿಡಿಯೊಗಳು ಸೋರಿಕೆಯಾಗುವ ಸಾಧ್ಯತೆ ಇದೆ. ಇದಕ್ಕೆ ಕಡಿವಾಣ ಹಾಕುವ ದೃಷ್ಟಿಯಿಂದ ಆಂಡ್ರಾಯ್ಡ್ 13ರಲ್ಲಿ ನಿಗದಿತ ಫೋಟೊ ಮತ್ತು ವಿಡಿಯೊ ಮಾತ್ರ ಹಂಚಿಕೊಳ್ಳಲು ಅನುಕೂಲವಾಗುವಂತೆ ವೈಯಕ್ತಿಕ ಆ್ಯಪ್ ಫೀಚರ್ ಅನ್ನು ರಚಿಸಲಾಗಿದೆ. ಅದಕ್ಕೆ ಯಾವುದೇ ಪ್ರತ್ಯೇಕ ಅನುಮತಿ ನೀಡುವ ಅಗತ್ಯತೆ ಇರುವುದಿಲ್ಲ.

## ಭಾಷಾ ಆದ್ಯತೆ

ಬಹು ಭಾಷಾ ಬಳಕೆದಾರರ ಅನುಕೂಲಕ್ಕೆಂದು ವಿಶೇಷ ಫೀಚರ್ ಅನ್ನು ಆಂಡ್ರಾಯ್ಡ್ 13ರಲ್ಲಿ ಅಭಿವೃದ್ಧಿಪಡಿಸಿದ್ದು, ಇದು ಮಲ್ಟಿ ವಿಂಡೋ ರೀತಿಯಲ್ಲಿ ಒಂದೇ ಸಮಯದಲ್ಲಿ ಬೇರೆ ಬೇರೆ ಭಾಷೆಗಳಿಗೆ ಫೋನ್ ಬಳಕೆಯನ್ನು ಬದಲಿಸಿಕೊಳ್ಳಲು ಅನುಕೂಲ ಮಾಡಿಕೊಡುತ್ತದೆ. ಈಗಿರುವ ಆಂಡ್ರಾಯ್ಡ್ ವರ್ಶನ್‌ನಲ್ಲಿ ಇಂಗ್ಲೀಷ್ ಭಾಷೆಯಿಂದ ಕನ್ನಡಕ್ಕೆ ಅಥವಾ ಕನ್ನಡದಿಂದ ಇಂಗ್ಲೀಷ್‌ಗೆ ಬದಲಾಗಲು ಸಾಕಷ್ಟು ಸಮಯ ಬೇಕಾಗುತ್ತದೆ. ಇದು ಕಿರಿಕಿರಿ ಸಹ. ಇದನ್ನು ಕ್ಷಣಾರ್ಧದಲ್ಲಿ ಬದಲಾಯಿಸುವ ಪ್ರಕ್ರಿಯೆಯನ್ನು ಹೊಸ ವರ್ಶನ್‌ನಲ್ಲಿ ತರಲಾಗಿದ್ದು, ಹೀಗೆ ಇನ್ನೂ ಹಲವು ರೀತಿಯ ಅಪ್‌ಡೇಟ್‌ಗಳನ್ನು ಒದಗಿಸಲಾಗುತ್ತದೆ ಎಂದು ಗೂಗಲ್ ಹೇಳಿದೆ. ■

# ಮೇನಲ್ಲಿ 5ಜಿ ಹರಾಜು ಸಾಧ್ಯತೆ

ವಿಶ್ವದ ಕೆಲ ದೇಶಗಳು ಈಗಾಗಲೇ ಬಳಸುತ್ತಿರುವ 5ಜಿ ತಂತ್ರಜ್ಞಾನದ ನೆಟ್‌ವರ್ಕ್ ಅನ್ನು ಬರಮಾಡಿಕೊಳ್ಳಲು ಭಾರತವೂ ಸಕಲ ಸಿದ್ಧತೆ ಮಾಡಿಕೊಂಡಿದ್ದು, ಟೆಲಿಕಾಂ ಕಂಪನಿಗಳು ಈಗಾಗಲೇ ಪ್ರಾಯೋಗಿಕ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿ ಅಂತಿಮ ರೂಪುರೇಷೆಯತ್ತ ಗಮನ ಹರಿಸಿವೆ. ಆದರೆ, ಈ ತಂತ್ರಜ್ಞಾನಕ್ಕೆ ಅತ್ಯಗತ್ಯವಾದ ತರಂಗಾಂತರದ ಹಂಚಿಕೆಯ ಪ್ರಕ್ರಿಯೆಗೆ ಇದುವರೆಗೆ ಚಾಲನೆ ಸಿಕ್ಕಿರಲಿಲ್ಲ. ಈಗ ಆ ಪ್ರಕ್ರಿಯೆಗೆ ವೇಗ ಸಿಕ್ಕಿದ್ದು ಮೇ ತಿಂಗಳ ಅಂತ್ಯದೊಳಗೆ ತರಂಗಾಂತರ ಹಂಚಿಕೆ ಪ್ರಕ್ರಿಯೆ ನಡೆಯುವ ಸಾಧ್ಯತೆ ಇದೆ.

ಹಂಚಿಕೆ ಪ್ರಕ್ರಿಯೆಗೂ ಮುನ್ನ ತರಂಗಾಂತರಗಳ ಮಾರಾಟ ಪ್ರಕ್ರಿಯೆಯ ನಿಯಮಗಳಿಗೆ ಸಂಬಂಧಿಸಿದ ಶಿಫಾರಸುಗಳನ್ನು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ಸಲ್ಲಿಸಬೇಕಿದೆ. ಈ ಕಾರ್ಯವು ಪ್ರಗತಿಯಲ್ಲಿದ್ದು, ಮಾರ್ಚ್ ಒಳಗೆ ಸಲ್ಲಿಸುವ ನಿರೀಕ್ಷೆ ಇದೆ. ಇದು ಸಾಧ್ಯವಾದರೆ, ಹರಾಜು ಪ್ರಕ್ರಿಯೆಯು ಮೇ ತಿಂಗಳಿನಲ್ಲಿ ನಡೆಯಬಹುದು.

ಈ ಬಗ್ಗೆ ಈಚೆಗೆ ಪ್ರತಿಕ್ರಿಯಿಸಿರುವ ಕೇಂದ್ರ ಸರ್ಕಾರದ ದೂರಸಂಪರ್ಕ ಇಲಾಖೆ ಸಚಿವ ಅಶ್ವಿನಿ ವೈಷ್ಣವ್, "5ಜಿ ತರಂಗಾಂತರ ಹರಾಜಿಗೆ ಸಂಬಂಧಿಸಿದ ಶಿಫಾರಸುಗಳನ್ನು ಮಾರ್ಚ್‌ಗೆ ಮುನ್ನ ಸಲ್ಲಿಸುವುದಾಗಿ ಟ್ರಾಯ್ ಹೇಳಿದೆ.' ಅದು ನಿಗದಿತ ಸಮಯದೊಳಗೆ ಪೂರ್ಣಗೊಂಡರೆ ಹರಾಜನ್ನು ಆದಷ್ಟು ಬೇಗ ನಡೆಸುವುದಕ್ಕೆ ಅಗತ್ಯವಿರುವ ಇನ್ನಿತರ ಪ್ರಕ್ರಿಯೆಗಳನ್ನು ಇಲಾಖೆಯು ಮಾಡಿಕೊಳ್ಳಲಿದೆ' ಎಂದಿದ್ದಾರೆ.

ಇನ್ನು 'ಟ್ರಾಯ್ ಶಿಫಾರಸು ಮಾರ್ಚ್ ಒಳಗೆ ಬರಲಿದೆ. ಅದಾದ ನಂತರ, ನಮಗೆ ಶಿಫಾರಸುಗಳ ಬಗ್ಗೆ ತೀರ್ಮಾನ ಕೈಗೊಳ್ಳಲು ಒಂದು ತಿಂಗಳು ಬೇಕು' ಎಂಬುದು ಇಲಾಖೆಯ ಕಾರ್ಯದರ್ಶಿ ಕೆ. ರಾಜಾರಾಮನ್ ತಿಳಿಸಿದ್ದಾರೆ. ಇಲಾಖೆಯ ಮಾಹಿತಿ ಪ್ರಕಾರ, 4ಜಿ ಸೇವೆಗಳಲ್ಲಿ ಸಿಗುವುದಕ್ಕಿಂತ ಹತ್ತು ಪಟ್ಟು ಹೆಚ್ಚಿನ ಡೌನ್‌ಲೋಡ್ ವೇಗ ಹಾಗೂ ಇನ್ನಿತರ ಅನನ್ಯ ಸೇವೆಗಳು 5ಜಿ ನೆಟ್‌ವರ್ಕ್‌ನಲ್ಲಿ ಲಭ್ಯವಾಗಲಿದೆ. ■